# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **557 (728)**
ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್.ಎಸ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 11.12.2023
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮೀಣ ಭಾಗಗಳಲ್ಲಿರುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿಕೆ ಕುರಿತು ಸರ್ಕಾರದ ಮುಂದಿರುವ ಪ್ರಸ್ತಾವನೆಗಳು ಮತ್ತು ಪ್ರಸ್ತುತ ಆ ಕುರಿತಾದ ಅನುಕರಣೀಯ ಕ್ರಮಗಳು ಯಾವುವು; | **1. ಗ್ರಂಥಾಲಯ:-** ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯಲ್ಲಿ ಕೇಂದ್ರ ಮತ್ತು ರಾಜ್ಯದ ಸಹಭಾಗಿತ್ವದಲ್ಲಿ ಸರ್ಕಾರಿ ಶಾಲೆಗಳಿಗೆ ಗ್ರಂಥಾಲಯ ಪುಸ್ತಕಗಳನ್ನು ಒದಗಿಸುವುದು ಮತ್ತು ಓದುವ ಮೂಲೆಗಳನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ಈ ಕೆಳಕಂಡ ಅನುದಾನವನ್ನು ಒದಗಿಸಲಾಗಿದೆ.<br><br>**a)** ರಾಜ್ಯದ ಒಟ್ಟು 46,314 (ಪ್ರಾಥಮಿಕ, ಪ್ರೌಢ ಮತ್ತು ಸೀನಿಯರ್ ಸೆಕೆಂಡರಿ) ಶಾಲೆಗಳಿಗೆ ಒಟ್ಟು **ರೂ.3051.83** ಲಕ್ಷ ಅನುದಾನವು 2023-24ನೇ ಸಾಲಿನಲ್ಲಿ ಅನುಮೋದನೆಗೊಂಡಿರುತ್ತದೆ. ಕೇಂದ್ರ ಸರ್ಕಾರದಿಂದ ಸದರಿ ಅನುದಾನದ ಬಿಡುಗಡೆಯನ್ನು ಆಧರಿಸಿ ಆದ್ಯತಾನುಸಾರ ಗ್ರಂಥಾಲಯ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.<br><br>**b)** ರಾಜ್ಯದ ಒಟ್ಟು (ಪ್ರಾಥಮಿಕ, ಪ್ರೌಢ ಮತ್ತು ಸೀನಿಯರ್ ಸೆಕೆಂಡರಿ ಶಾಲೆಗಳ) **79,477** ಶಿಕ್ಷಕರುಗಳಿಗೆ ಅವರ ಬೋಧನಾ ಸಾಮರ್ಥ್ಯ ವೃದ್ಧಿಸುವ ಸಂಬಂಧ ತರಬೇತಿಯನ್ನು ನೀಡಲು ರೂ.1986.92 ಲಕ್ಷಗಳ ಅನುಮೋದನೆಯಾಗಿದ್ದು, ಪ್ರಸ್ತುತ ತರಬೇತಿ ನಡೆಯುತ್ತಿದೆ.<br><br>**c)** 2023-24ನೇ ಸಾಲಿನ ಬಜೆಟ್ ಘೋಷಣೆಯಂತೆ ರಾಜ್ಯದ **ಒಟ್ಟು 24,347** ಶಾಲೆಗಳಲ್ಲಿ ಓದುವ ಮೂಲೆಗಳನ್ನು ಸ್ಥಾಪಿಸುವ ಸಂಬಂಧ ಗ್ರಂಥಾಲಯ ಪುಸ್ತಕಗಳು ಮತ್ತು ನಿಯತಕಾಲಿಕಗಳ ಖರೀದಿಗಾಗಿ ಒಟ್ಟು **ರೂ.20** ಕೋಟಿಗಳ ಪ್ರಸ್ತಾವನೆಯನ್ನು ಅನುಮೋದಿಸಲಾಗಿದ್ದು, ಶಾಲೆಗಳಿಗೆ ಶೀಘ್ರದಲ್ಲೇ ಸದರಿ ಅನುದಾನ ಬಿಡುಗಡೆಯಾಗಲಿದೆ. |

2. **ಕಲಿಕಾ ಬಲವರ್ಧನೆ:-**

2023-24 ನೇ ಸಾಲಿನಲ್ಲಿ ಕಲಿಕಾ ಬಲವರ್ಧನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯ 2022-23 ಹಾಗೂ 2023-24 ನೇ ಸಾಲಿನ ವಿವಿಧ ಕಾರ್ಯಕ್ರಮದಡಿಯಲ್ಲಿ ಲಭ್ಯವಾಗುವ ಪಿ.ಎ.ಬಿ. ಅನುಮೋದಿತ ಅನುದಾನದಲ್ಲಿ **7813.13** ಲಕ್ಷ ಅನುದಾನವನ್ನು ಮರುಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಅನುಮೋದಿಸಲ್ಪಟ್ಟಿದೆ.

ಸದರಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕನ್ನಡ, ಇಂಗ್ಲೀಷ್ ,ಉರ್ದು, ಮರಾಠಿ, ತಮಿಳು,ತೆಲುಗು ಮಾಧ್ಯಮಗಳಲ್ಲಿ ವಿಷಯವಾರು ವಿದ್ಯಾರ್ಥಿ ಚಟುವಟಿಕೆ ಪುಸ್ತಕ ಹಾಗೂ ಶಿಕ್ಷಕರ ಚಟುವಟಿಕೆ ಕೋಶಗಳನ್ನು ವಿನ್ಯಾಸಗೊಳಿಸಿ, ಮುದ್ರಿಸಿ ಸರಬರಾಜು ಮಾಡಲಾಗುತ್ತಿದೆ.

3. **"ವಿದ್ಯಾಗಮ" ಯೋಜನೆ, :-**

ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿವರೆಗಿನ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಸರ್ಕಾರವು ಹಲವಾರು ಶೈಕ್ಷಣಿಕ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಕೋವಿಡ್-19 ಸಾಂಕ್ರಾಮಿಕ ಹಿನ್ನಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಉಂಟಾದ ಕಲಿಕಾ ನಷ್ಟವನ್ನು ಪರಿಹರಿಸಲು "ವಿದ್ಯಾಗಮ" ಯೋಜನೆ

4. **ಮರುಸಿಂಚನಾ ಕಾರ್ಯಕ್ರಮ :-**

ಪ್ರೌಢ ಹಂತದ ವಿದ್ಯಾರ್ಥಿಗಳು ತರಗತಿಗನುಗುಣವಾದ ಕಲಿಕಾ ಫಲಗಳನ್ನು ಸಾಧಿಸಿ 10ನೇ ತರಗತಿ ಪರೀಕ್ಷೆಯನ್ನು ಯಶಸ್ವಿಯಾಗಿ ಸಾಧಿಸುವಂತೆ ಅನುಕೂಲಿಸಲು 8, 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ **ಮರುಸಿಂಚನಾ ಕಾರ್ಯಕ್ರಮವನ್ನು** ಅನುಷ್ಠಾನಗೊಳಿಸಲಾಗುತ್ತಿದೆ.

5. **ಆವಿಷ್ಕಾರ್ ಇನ್ನೋವೇಟೀವ್ ಲ್ಯಾಬ್ :-**

ವಿದ್ಯಾರ್ಥಿಗಳ ಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಹಾಗೂ ಅವರಲ್ಲಿ ಆವಿಷ್ಕಾರಾತ್ಮಕ ಮನೋಭಾವನೆಯನ್ನು ವೃದ್ಧಿಸುವಲ್ಲಿ ಸಹಕರಿಸಲು ರಾಜ್ಯದ ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿನ 73 ಕೆ.ಪಿ.ಎಸ್

| | | |
|---|---|---|
| | | ಮತ್ತು 50 ಆದರ್ಶ ವಿದ್ಯಾಲಯ ಶಾಲೆಗಳಲ್ಲಿ **ಆವಿಷ್ಕಾರ್ ಇನ್ನೋವೇಟೀವ್ ಲ್ಯಾಬ್ ಗಳನ್ನು ಸ್ಥಾಪಿಸಲಾಗಿದೆ.**<br><br>ಪ್ರೌಢ ಶಾಲಾ ವಿದ್ಯಾರ್ಥಿಗಳಲ್ಲಿ ವೃತ್ತಿಪರತೆ ಹಾಗೂ ಔದ್ಯೋಗಿಕತೆಯನ್ನು ಬೆಳೆಸಲು ಆಯ್ದ 275 ಶಾಲೆಗಳಲ್ಲಿ ವೃತ್ತಿ ಶಿಕ್ಷಣವನ್ನು ಒದಗಿಸಲಾಗುತ್ತಿದ್ದು ವಿದ್ಯಾರ್ಥಿಗಳು 6 ಸೆಕ್ಟೇರ್‌ಗಳ ಅಡಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.<br><br>**ದ್ವಿಭಾಷಾ ಮಾಧ್ಯಮ ಶಾಲೆಗಳ ಆರಂಭ:-**<br>ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಅವಕಾಶವನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ 2019-20ನೇ ಸಾಲಿನಿಂದ ರಾಜ್ಯದ 2003 ಕನ್ನಡ ಮಾಧ್ಯಮ ಶಾಲೆಗಳಲ್ಲಿ ಹಾಗೂ 400 ಉರ್ದು ಮಾಧ್ಯಮ ಶಾಲೆಗಳಲ್ಲಿ ದ್ವಿ-ಭಾಷಾ ವಿಭಾಗಗಳನ್ನು ಪ್ರಾರಂಭಿಸಲಾಗಿದೆ. |
| ಆ) | ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಶಿಕ್ಷಣ ಪಡೆಯುವಿಕೆಯ ತೇರ್ಗಡೆಯ ಪ್ರಮಾಣದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳ ಹಿನ್ನಡೆ ಹಾಗೂ ಮುನ್ನಡೆಗಳ ಪ್ರಮಾಣವೆಷ್ಟು; | **ಎಸ್.ಎಸ್.ಎಲ್.ಸಿ :**<br>• 2021 ರಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ ತೇರ್ಗಡೆಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ.<br>• 2022 ರಲ್ಲಿ ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ತೇರ್ಗಡೆ ಪ್ರಮಾಣ ಶೇ 4.56% ರಷ್ಟು ಹೆಚ್ಚಾಗಿದೆ.<br>• 2023 ರಲ್ಲಿ ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ತೇರ್ಗಡೆ ಪ್ರಮಾಣ ಶೇ 5.42% ರಷ್ಟು ಹೆಚ್ಚಾಗಿದೆ.<br><br>**ಪಿ.ಯು.ಸಿ. :-**<br>• 2021 ರಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ ತೇರ್ಗಡೆಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ.<br>• 2022 ರಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗಿಂತ ನಗರ ಪ್ರದೇಶದ ವಿದ್ಯಾರ್ಥಿಗಳ ತೇರ್ಗಡೆ ಪ್ರಮಾಣ ಶೇ 0.73% ರಷ್ಟು ಹೆಚ್ಚಾಗಿದೆ.<br>• 2023 ರಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗಿಂತ ನಗರ ಪ್ರದೇಶದ ವಿದ್ಯಾರ್ಥಿಗಳ ತೇರ್ಗಡೆ ಪ್ರಮಾಣ ಶೇ 0.54 % ರಷ್ಟು ಹೆಚ್ಚಾಗಿದೆ. |

ಇ) ಗ್ರಾಮೀಣರು ಗಣನೀಯ ಪ್ರಮಾಣದಲ್ಲಿ ಸರ್ಕಾರಿ ಶೈಕ್ಷಣಿಕ ವ್ಯವಸ್ಥೆಯನ್ನು ಅವಲಂಬಿತರಾಗಿರುವುದರಿಂದ ಆದ್ಯತಾನುಸಾರವಾಗಿ ಎಲ್ಲಾ ಶಾಲೆಗಳಲ್ಲಿ ವ್ಯವಸ್ಥಿತ ಮೂಲಸೌಲಭ್ಯಗಳು ಹಾಗೂ ಸಿಬ್ಬಂದಿ ವರ್ಗಗಳ ಸುವ್ಯವಸ್ಥೆ ಕುರಿತು ಸರ್ಕಾರದ ಕ್ರಮಗಳು ಯಾವುವು ?

ಗ್ರಾಮೀಣ ಶಾಲೆಗಳು ಸೇರಿದಂತೆ ಸರ್ಕಾರದ ಎಲ್ಲಾ ಶಾಲೆಗಳ ಅಭಿವೃದ್ಧಿಗಾಗಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಮೂಲಭೂತ ಸೌಲಭ್ಯಕ್ಕಾಗಿ ಕಳೆದ 03 ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನ ಮಂಜೂರಾಗಿರುತ್ತದೆ.

| **ಪ್ರಾಥಮಿಕ ಮತ್ತು ಪ್ರೌಢಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಮಂಜೂರಾದ ಅನುದಾನದ ವಿವರ** | | | |
|---|---|---|---|
| **ವರ್ಷ** | **ಶಾಲೆಗಳ ಸಂಖ್ಯೆ** | **ಕೊಠಡಿಗಳ ಸಂಖ್ಯೆ** | **ಮಂಜೂರಾದ ಅನುದಾನ (ರೂ. ಲಕ್ಷಗಳಲ್ಲಿ)** |
| 2020-21 | 1006 | 1479 | 18000.00 |
| 2021-22 | ಕೋವಿಡ್ -19 ಕಾರಣದಿಂದಾಗಿ ಕೊಠಡಿ ನಿರ್ಮಾಣಕ್ಕೆ ಅನುದಾನ ಮಂಜೂರಾಗಿರುವುದಿಲ್ಲ | | |
| 2022-23 | 4803 | 7311 | 102532.00 |
| **ಒಟ್ಟು =** | 5809 | 8080 | 120532.00 |

| ಪ್ರಾಥಮಿಕ ಮತ್ತು ಪ್ರೌಢಶಾಲಾ ಕೊಠಡಿಗಳ ದುರಸ್ಥಿ ಕಾಮಗಾರಿಗೆ ಮಂಜೂರಾದ ಅನುದಾನದ ವಿವರ | | |
|---|---|---|
| **ವರ್ಷ** | **ಶಾಲೆಗಳ ಸಂಖ್ಯೆ** | **ಮಂಜೂರಾದ ಅನುದಾನ (ರೂ. ಲಕ್ಷಗಳಲ್ಲಿ)** |
| 2020-21 | 155 | 405.11 |
| 2021-22 | 518 | 1947.00 |
| 2022-23 | 201 | 4850.00 |
| **ಒಟ್ಟು =** | **874** | **7202.11** |

- 2021-22ನೇ ಸಾಲಿಗೆ ಅಮೃತಶಾಲಾ ಸೌಲಭ್ಯ ಯೋಜನೆಯಡಿ ರಾಜ್ಯವಲಯ ಒಟ್ಟು 750 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮೂಲಭೂತ ಸೌಲಭ್ಯಗಳಿಗೆ ತಲಾ ರೂ.10.00ಲಕ್ಷಗಳಂತೆ ಒಟ್ಟು ರೂ.7500.00 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.
- 2022-23ನೇ ಸಾಲಿಗೆ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 6601 ಸರ್ಕಾರಿ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ವಿವೇಕ ಯೋಜನೆಯಡಿ ಮಂಜೂರಾತಿ ನೀಡಲಾಗಿದೆ. ಸದರಿ ಕೊಠಡಿಗಳ ನಿರ್ಮಾಣಕ್ಕಾಗಿ ಒಟ್ಟು ಮೊತ್ತ ರೂ.94375.00 ಲಕ್ಷಗಳ

ಅನುದಾನದ ಅವಶ್ಯಕತೆಯಿದ್ದು, 2022-23ನೇ ಸಾಲಿನ ರೂ.46901.86 ಲಕ್ಷಗಳನ್ನು ಹಾಗೂ 2023-24ನೇ ಸಾಲಿನ ಒಟ್ಟು ರೂ.16757.87 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಹಾಗೂ ಬಹುತೇಕ ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುತ್ತದೆ. ಹಾಗೂ ವಿವಿಧ ಹಂತದಲ್ಲಿರುತ್ತದೆ.

- 2020-21ರಿಂದ 2022-23ನೇ ಸಾಲಿನ ನರೇಗಾ ಒಗ್ಗೂಡಿಸುವಿಕೆಯ ಮೂಲಕ ರಾಜ್ಯವಲಯ ಸರ್ಕಾರಿ ಶಾಲೆಗಳ ಶೌಚಾಲಯ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆಯಾಗಿರುತ್ತದೆ.

| ಕ್ರ. ಸಂ. | ವರ್ಷ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 01 | 2020-21 | 2920.99 |
| 02 | 2021-22 | 3500.00 |
| 03 | 2022-23 | 3500.00 |
| 04 | 2023-24 | 2000.00 |
| ಒಟ್ಟು = | | **11920.99** |

- ಬೋಧಕ ಮತ್ತು ಬೋಧಕೇತರ ವೃಂದದ ಸಿಬ್ಬಂದಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಉದ್ಭವವಾಗುವ ಖಾಲಿ ಹುದ್ದೆಗಳಿಗೆ ಎದುರಾಗಿ ನೇರನೇಮಕಾತಿ ಹಾಗೂ ಬಡ್ತಿ ಹುದ್ದೆಗಳನ್ನು ರಿಕ್ತಸ್ಥಾನಗಳಲ್ಲಿ ತುಂಬಲು ಕ್ರಮವಹಿಸಲಾಗುತ್ತದೆ.
- ಬೋಧಕೇತರ ಸಿಬ್ಬಂದಿಗೆ ಅನುಕಂಪದ ಆಧಾರದ ನೇಮಕಾತಿಗಳಿಂದಲೂ ತುಂಬಲಾಗುವುದು.
- ಬೋಧಕ ವೃಂದದ ಖಾಲಿ ಹುದ್ದೆಗಳಿಗೆ ಎದುರಾಗಿ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಖಾಯಂ ಶಿಕ್ಷಕರ ನೇರ ನೇಮಕಾತಿಯಾಗುವವರೆಗೂ ಅಥವಾ ಖಾಲಿ ಹುದ್ದೆ ವರ್ಗಾವಣೆಯಿಂದ ಭರ್ತಿಯಾಗುವವರೆಗೂ ಅಥವಾ ಶೈಕ್ಷಣಿಕ ವರ್ಷದ ಅಂತ್ಯದವರೆಗೂ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

ಇಪಿ 248 ಎಸ್‌ಎಲ್‌ಬಿ 2023

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು